ದಿ:-28.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆಸಿಕೆ. ವಕೀಲರಿಂದಃ

ದಾವಾ ಸ್ವತ್ತು ಜಕ್ಕನಹಳ್ಳಿ ಗ್ರಾಮದಲ್ಲಿ ಇರುತ್ತದೆ. ಈ ಸ್ವತ್ತಿನ ಮೂಲ ಸರ್ವೆ ನಂ.84 ರಲ್ಲಿ 5 ಎಕರೆ 15 ಗುಂಟೆ ಇತ್ತು. ಇದರಲ್ಲಿ ಸ.ನಂ.84/1 ರಲ್ಲಿ 3 ಎಕರೆ 5 ಗುಂಟೆ ಮೋಹನದಾಸ್ ಮತ್ತು ಸಹೋದರರ ಹೆಸರಿನಲ್ಲಿ, ಸ.ನಂ.84/2 ರಲ್ಲಿ 1 ಎಕರೆ 5 ಗುಂಟೆ ಇದ್ದು, ಸ.ನಂ.84/3 ರಲ್ಲಿ 1 ಎಕರೆ 5 ಗುಂಟೆ ಇರುತ್ತದೆ. ಸ.ನಂ.84/2 ರಲ್ಲಿನ 1 ಎಕರೆ 5 ಗುಂಟೆ ಜಮೀನಿನ ಖಾತೆ ಮತ್ತು ಎಂಆರ್. ವಾದಿಯ ಹೆಸರಿನಲ್ಲಿ ಇರುತ್ತದೆ, ಅದು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಸ.ನಂ.84/3 ಕೆಂಚಯ್ಯನ ಹೆಸರಿನಲ್ಲಿ ಇತ್ತು, ಅವರ ಮರಣಾನಂತರ ಅದು ಅವರ ಮಕ್ಕಳ ಹೆಸರಿನಲ್ಲಿ ಇರಬಹುದು. ಸ.ನಂ.84 ಇದು 1994-95 ರಲ್ಲಿ ಪೋಡಿಯಾಗಿ 1997-98 ರಲ್ಲಿ ಸ.ನಂ.84/1, 84/2, 84/3 ಎಂದು ಖಾತೆ ಬಂದಿರುತ್ತದೆ ಎಂದರೆ ಸರಿ. ಶೇಷ ಪೂಜಾರಿ ನಮ್ಮ ತಾಯಿಯ ತಂದೆ. ನನ್ನ ತಾಯಿಯ ಹೆಸರು ಕಲ್ಯಾಣಿ. ಶೇಷ ಪೂಜಾರಿಯವರು ಇದ್ದಾಗ ನಾನು ಅವರ ಮನೆಯಲ್ಲೇ ಇದ್ದೆ ಎಂದರೆ ಸಾಕ್ಷಿ ನಾವೆಲ್ಲ ಒಟ್ಟಿಗೇ ಇದ್ದೆವು ಎಂದು ನುಡಿಯುತ್ತಾರೆ. ನಮ್ಮ ತಂದೆ ಶೇಷ ಪೂಜಾರಿ ಒಟ್ಟಿಗೇ ಇದ್ದರು, ಆದರೆ ಮನೆ ಅಳಿಯ ಎಂದು ಇದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ನನ್ನ ತಂದೆ ಮುತ್ತಪ್ಪ ಪೂಜಾರಿಗೆ ಸ್ವಯಾರ್ಜಿತ ಆಸ್ತಿ ಇತ್ತು, ಆತನ ತಂದೆ ತಾಯಿಯಿಂದ ಬಂದ ಆಸ್ತಿಗಳು ಇರಲಿಲ್ಲ.

ನಮ್ಮ ತಂದೆಗೆ ಸ.ನಂ.84/1 ರಲ್ಲಿ 3 ಎಕರೆ 5 ಗುಂಟೆ, ಸ.ನಂ.220 ರಲ್ಲಿ 1 ಎಕರೆ 5 ಗುಂಟೆ, ಸ.ನಂ.201 ರಲ್ಲಿ 5 ಎಕರೆ 5 ಗುಂಟೆ ಜಮೀನು ಇತ್ತು. ಇವುಗಳಲ್ಲಿ ಸ.ನಂ.220 ಅನ್ನು ಮಾತ್ರ ನಾನು ಹುಟ್ಟಿದ ನಂತರ ತೆಗೆದುಕೊಂಡಿರುತ್ತಾರೆ. ಸ.ನಂ.84/1 ಅನ್ನು ಶೇಷ ಪೂಜಾರಿಯವರು ನನ್ನ ತಂದೆಗೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಇದನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1946-47 ರಲ್ಲಿ ನನ್ನ ತಂದೆ ಸ.ನಂ.84/1 ಅನ್ನು ಖರೀದಿ ಮಾಡಿರಬಹುದು. ಸ.ನಂ.84/1 ಅನ್ನು ಖರೀದಿ ಮಾಡುವಾಗ ನಮ್ಮ ತಂದೆ ಯಾವ ಉದ್ಯೋಗ ಮಾಡುತ್ತಿದ್ದರು ಮತ್ತು ಅವರಿಗೆ ಎಷ್ಟು ಆದಾಯ ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸ.ನಂ.84/2 ಅನ್ನು ನನ್ನ ತಂದೆ ಖರೀದಿ ಮಾಡಿದ್ದರು. ಸ.ನಂ.84/1 ಮತ್ತು 84/2 ಅನ್ನು ಶೇಷಪೂಜಾರಿ ಮತ್ತು ನನ್ನ ತಂದೆ ಒಟ್ಟಿಗೇ ವ್ಯವಸಾಯ ಮಾಡುತ್ತಿದ್ದರೇ ಎಂದರೆ ಸಾಕ್ಷಿ ನಾನು ಹುಟ್ಟುವ ಮೊದಲು ಹೇಗೆ ಮಾಡುತ್ತಿದ್ದರೋ ಗೊತ್ತಿಲ್ಲ, ಆದರೆ ನಾನು ಹುಟ್ಟಿದ ನಂತರ ನನ್ನ ತಂದೆ ಈ ಎರಡೂ ಆಸ್ತಿಗಳನ್ನು ವ್ಯವಸಾಯ ಮಾಡುತ್ತಿದ್ದರು ಎಂದು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಸ.ನಂ.84/1 ಮತ್ತು 84/2 ರಲ್ಲಿ ವ್ಯವಸಾಯ ಮಾಡುತ್ತಿರುವಾಗ ಶೇಷಪೂಜಾರಿಯವರ ಹೆಂಡತಿ ಸೀತಮ್ಮ ಯಾನೆ ಚೆಲ್ಲಮ್ಮ ಬದುಕಿದ್ದರು.

ಸ.ನಂ.84/2 ರಲ್ಲಿನ ಮ್ಯಾನೇಜ್ ಮೆಂಟ್ ಅನ್ನು ಶೇಷಪೂಜಾರಿಯವರ ಹೆಂಡತಿ ಸೀತಮ್ಮ ಯಾನೆ ಚೆಲ್ಲಮ್ಮ ನೋಡಿಕೊಳ್ಳುತ್ತಿದ್ದರು, ವ್ಯವಸಾಯವನ್ನು ನನ್ನ ತಂದೆ ಮಾಡುತ್ತಿದ್ದರು. ನನ್ನ ತಂದೆ ಸಹಿ ಮಾಡಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ನನ್ನ ತಂದೆ ಸಾಲ ಪಡೆಯುವಾಗ ಬ್ಯಾಂಕಿಗೆ ಮತ್ತು

ಕಾಫಿ ಬೋರ್ಡಿಗೆ ಆಧಾರ ಮಾಡುವಾಗ ಹಾಕಿದ ಸಹಿಗಳನ್ನು ನಾನು ನೋಡಿರುತ್ತೇನೆ. ಈ ಬಗ್ಗೆ ಕಾಫಿ ಬೋರ್ಡಿನ ದಾಖಲೆಗಳು ನನ್ನ ಬಳಿ ಇರುತ್ತವೆ. ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಸ.ನ.84/2, ಶೇಷ ಪೂಜಾರಿಯ ನಂತರ ಸೀತಮ್ಮನವರಿಗೆ ಮತ್ತು ವಾದಿಗೆ ಹೇಗೆ ಬಂದಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನಲ್ಲಿ, ನ್ಯಾಯಾಲಯವು ಇದು ಒಟ್ಟು ಕುಟುಂಬದ ಆಸ್ತಿ ಎಂದರೆ ಮಾತ್ರ ನಮಗೆ ಹಕ್ಕು ಬರುತ್ತದೆ ಇಲ್ಲ ಎಂದರೆ ನಮಗೆ ಹಕ್ಕು ಬರುವುದಿಲ್ಲ ಎಂದರೆ ಸರಿ. ನನ್ನ ಹೆಸರಿಗೆ ಪೋಡಿ ಆಗಿರುವ ಸ.ನಂ.84/1 ರಲ್ಲಿನ 3 ಎಕರೆ 5 ಗುಂಟೆ ಜಮೀನಿನಲ್ಲಿ ನನಗೆ ಹಕ್ಕು ಇರುತ್ತದೆ. 1986 ರಿಂದ ನಾನು ಮತ್ತು ವಾದಿ ಸ.ನಂ.84/1 ಮತ್ತು ಸ.ನಂ.84/2 ರಲ್ಲಿ ಪ್ರತ್ಯೇಕವಾಗಿ ವ್ಯವಸಾಯ ಮಾಡಲು ಪ್ರಾರಂಭಿಸಿದೆವು, ಆ ಸಮಯದಿಂದಲೇ ನಾನು ಮತ್ತು ವಾದಿ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದೆವು.

1986 ರಿಂದ 2017 ರವರೆಗೆ ನನ್ನ ಮತ್ತು ವಾದಿಯ ಮಧ್ಯೆ ಸ್ವಾಧೀನದ ಬಗ್ಗೆ ಯಾವುದೇ ತಕರಾರು ಇರಲಿಲ್ಲ. ನಾವು ಸ.ನಂ.84/1, 84/2 ಮತ್ತು 84/3 ಎಂದು ಪೋಡಿಯಾದ ಪ್ರಕಾರವೇ ಅನುಭವಿಸಿಕೊಂಡು ಬರುತ್ತಿದ್ದೆವು ಎಂದರೆ ಸರಿ. ಆಗಸ್ಟ್-2017 ರಲ್ಲಿ ನಮ್ಮ ಮಧ್ಯೆ ತಕರಾರು ಬಂದು ನಾನು ಸರ್ವೆ ಮಾಡಿಸಲು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ದಿಃ08-08-2017 ರಂದು ಸರ್ವೆ ಇಲಾಖೆಯಿಂದ ಸರ್ವೆ ಮಾಡಲು ಬಂದಿದ್ದರು ಎಂದರೆ ಸರಿ. ಅವರು ಸರ್ವೆ ಮಾಡಿ ಹೋಗಿರುತ್ತಾರೆ ಆ ಬಗ್ಗೆ ನಾನು ವರದಿಯನ್ನು ಪಡೆದುಕೊಂಡಿಲ್ಲ. ಸರ್ವೆ ಸರಿಯಾಗಿದೆಯೋ ಇಲ್ಲವೋ ಎನ್ನುವ ಬಗ್ಗೆ ಏನನ್ನೂ ಹೇಳಿರುವುದಿಲ್ಲ. ನಾನು ಸರ್ವೆ ಮಾಡಿಸಲು ಕೊಟ್ಟ ಅರ್ಜಿಯ ಪ್ರತಿ ಹಾಗೂ ಸರ್ವೆಯವರು ನೀಡಿದ ನೋಟೀಸು ನನ್ನ ಬಳಿ ಇದೆಯೋ ಇಲ್ಲವೋ ಗೊತ್ತಿಲ್ಲ. ಸರ್ವೆಯವರು ಬಂದು ಸ್ಥಳ ಪರಿಶೀಲನೆ ಮಾಡಿ, ಅಳತೆ ಮಾಡಿ ಹೋಗಿರುತ್ತಾರೆ. ಸರ್ವೆ ಮಾಡಿದ ನಂತರ, ಸ.ನಂ.84/1, 84/2 ಮತ್ತು 84/3 ರ ಪೋಡಿ ಪ್ರಕಾರವೇ ಸ್ವಾಧೀನ ಸರಿಯಿದೆ ಎಂದು ಹೇಳಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪೋಡಿ ಪ್ರಕಾರವೇ ಸರಿಯಿದೆ ಎಂದು ಹೇಳಿದ ಕಾರಣ ನಾನು ಸರ್ವೆ ವರದಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಒಂದು ವರ್ಷದ ನಂತರ ನಾನು ಪುನಃ ಸರ್ವೆ ಮಾಡಿಸಲು ಅರ್ಜಿ ಕೊಟ್ಟಿರುತ್ತೇನೆ. ನನ್ನ 3 ಎಕರೆ 5 ಗುಂಟೆ ಜಮೀನನ್ನು ಹದ್ದುಬಸ್ತು ಮಾಡಿಕೊಡಿ ಎಂದು ಅರ್ಜಿ ಕೊಟ್ಟಿದ್ದೆ. ಈ ಬಗ್ಗೆ ಸ್ಕೆಚ್ ಕೊಟ್ಟಿದ್ದು ಅದನ್ನು ಹಾಜರುಪಡಿಸಬಹುದು. 2 ನೇ ಬಾರಿಗೆ ಸರ್ವೆ ಮಾಡುವ ಸಮಯ ಮಹಜರ್ ಮಾಡಿರುತ್ತಾರೆ. ಸ.ನಂ.84/2 ರಲ್ಲಿನ ಸ್ವಲ್ಪ ಜಾಗ ನನಗೆ ಸೇರಿದೆ ಎಂದು ಸರ್ವೆ ಮಾಡಿದ ನಂತರ ತೋರಿಸಿರುತ್ತಾರೆ. ಸ.ನಂ.84/2 ರಲ್ಲಿನ ಸ್ವಲ್ಪ ಜಾಗ 84/1 ರ ಜೊತೆ ಸೇರಿಕೊಂಡಿದೆ ಎಂದು ಹೇಳಿದ್ದರು. ವರದಿಯಲ್ಲಿ ಎಷ್ಟು ಗುಂಟೆ ಜಾಗ 8481 ರ ಜೊತೆ ಸೇರಿಕೊಂಡಿದೆ ಎಂದು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕುವ ಮೊದಲೇ ಸರ್ವೆ ಮಾಡಿ, ವರದಿಯನ್ನು ಕೊಟ್ಟಿದ್ದರು. ನನ್ನ ಲಿಖಿತ ಹೇಳಿಕೆ ಸಲ್ಲಿಸುವಾಗ ಇಷ್ಟು ಗುಂಟೆ ಜಾಗ ಒತ್ತುವರಿ ಆಗಿದೆ ಎನ್ನುವುದನ್ನು ಹೇಳಿರುವುದಿಲ್ಲ.

ಬಸವರಾಜು ಎನ್ನುವ ಸರ್ವೆಯರ್ ಬಂದಾಗ ಸರ್ವೆ ಮಾಡಿದ ನಂತರ, ನಾನು ಮತ್ತು ಬಸವರಾಜು ಸರ್ವೆಯರ್ ರವರು ವಾದಿಯನ್ನು ಹೆದರಿಸಿ, 10 ಗುಂಟೆ ಜಾಗ ಸ.ನಂ.84/2 ರಲ್ಲಿ ವಾದಿಯ ಸ್ವಾಧೀನದಲ್ಲಿ ಹೆಚ್ಚುವರಿಯಾಗಿ ಇದೆ ಎಂದು ಹೆದರಿಸಿ ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯು ಸ.ನ.84/1 ಮತ್ತು 84/2 ಅನ್ನು ಭಾಗ ಮಾಡಿಕೊಂಡಾಗ ಪ್ರತ್ಯೇಕವಾಗಿ ಬೇಲಿ ಹಾಕಿಕೊಂಡಿದ್ದೆವು ಎಂದರೆ ಸರಿ. ಹಿಂದೆ ಪೋಡಿ ಆಗಿದ್ದ ಜಾಗ ತೋರಿಸಿದ ರೀತಿಯಲ್ಲಿಯೇ ನಾವು ಬೇಲಿ ಹಾಕಿಕೊಂಡಿದ್ದೆವು ಎಂದರೆ ಸರಿ. ಬಸವರಾಜು ಸರ್ವೆಯರ್ ರವರು ಬಂದು ಹೋದ ನಂತರ ವಾದಿಯನ್ನು ಹೆದರಿಸಿ, ವಾದಿಗೆ ಸೇರಿದ 10 ಗುಂಟೆ ಜಮೀನನ್ನು ನಾನು ಅತಿಕ್ರಮಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಬಸವರಾಜು ಸರ್ವೆಯರ್ ಸೇರಿಕೊಂಡು, ಪೋಡಿ ಮಾಡಿರುವುದು ಸರಿಯಿಲ್ಲ, ಡಿಡಿಎಲ್.ಆರ್. ರವರಿಗೆ ಅಪೀಲು ಮಾಡಿ ಎಂದು ನಾವು ಪಿತೂರಿ ಮಾಡಿ ವಾದಿಗೆ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಡಿಡಿಎಲ್.ಆರ್. ರವರಿಗೆ ಅಪೀಲು ಮಾಡಿದ ನಂತರ ನಾನು ವಾದಿಗೆ ಸೇರಿದ 10 ಗುಂಟೆ ಜಮೀನನ್ನು ಒತ್ತುವರಿ ಮಾಡಿದ ವಿಚಾರ ಗೊತ್ತಾದ ಕಾರಣ ವಾದಿಯು ಅಪೀಲನ್ನು ವಜಾ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಕಾರಣದಿಂದ ಸ್ವಾಧೀನ ಕೋರಿ ವಾದಿಯು ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಡಿಡಿಎಲ್.ಆರ್. ರವರ ಮುಂದೆ ಸಲ್ಲಿಸಿದ್ದ ಆರ್.ಎ.143/2017 ಅನ್ನು ವಾದಿ ವಾಪಸ್ಸು ಪಡೆದಿರುತ್ತಾರೆ. ಯಾವ ಕಾರಣಕ್ಕೆ ವಾದಿಯು ಆರ್.ಎ.143/2017 ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ ಎಂದು ಗೊತ್ತಿಲ್ಲ ಮತ್ತು ನಾನು ಕಾರಣ ತಿಳಿದುಕೊಂಡಿಲ್ಲ. ವಾದಿಯು ಸಲ್ಲಿಸಿದ್ದ ಆರ್.ಎ.143/2017 ರಲ್ಲಿ ವಾದಿಯ ಸ್ವಾಧೀನದಲ್ಲಿ ಕೇವಲ 35 ಗುಂಟೆ ಮಾತ್ರ ಇದೆ ಎಂದು ಗೊತ್ತಾದ ಕಾರಣ ವಾದಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿರುವ ಸ.ನಂ.84/1 ರಲ್ಲಿ 3 ಎಕರೆ 5 ಗುಂಟೆ ಜಮೀನು ದಾಖಲೆ ಪ್ರಕಾರ ಇರುತ್ತದೆ. ನಾನು ಸ.ನಂ.84/1 ರಲ್ಲಿ ಈಗಲೂ ಸಹಾ ವಾಸ್ತವವಾಗಿ 3 ಎಕರೆ 5 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ. ಸ.ನಂ.84/2 ರ ಜಮೀನನ್ನುಅಕ್ರಮವಾಗಿ ಸ್ವಾಧೀನ ಪಡೆಯುವ ಉದ್ದೇಶ ನಮಗೆ ಇರುವುದಿಲ್ಲ. ಸ.ನಂ.84/2 ರಲ್ಲಿ ಹಕ್ಕನ್ನು ಸಾಧಿಸಬೇಕು ಎನ್ನು ಉದ್ದೇಶ ಸಹಾ ನಮಗೆ ಇರುವುದಿಲ್ಲ.

**<u>ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಅನುಮತಿ ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.